**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ, ನ್ಯಾಯಾಲಯ, ಬ್ಯಾಡಗಿ.**

**ಸಿಸಿ. ನಂ.224/2025**

ದೂರುದಾರರು:

ಕರ್ನಾಟಕ ರಾಜ್ಯ , ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ

ವಿರುದ್ಧ

ಆರೋಪಿತರು:

1. ಕಲ್ಲಯ್ಯ ಬಸಯ್ಯ ಪೂಜಾರ, ವಯಾ: 50 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

2. ನಾಗರಾಜ ಶಿವಯ್ಯ ಪೂಜಾರ, ವಯಾ: 29 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

3. ಪ್ರವೀಣ್ ಮಲ್ಲಯ್ಯ ಪೂಜಾರ, ವಯಾ: 27 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

4. ಮಲ್ಲಪ್ಪ ಮಲ್ಲಪ್ಪ ಕನವಳ್ಳಿ, ವಯಾ: 70 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

5. ಕಲ್ಲಯ್ಯ ಈರಯ್ಯ ಪೂಜಾರ, ವಯಾ: 37 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

6. ಮಂಜಯ್ಯ ವೀರಯ್ಯ ಪೂಜಾರ, ವಯಾ: 48 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

7. ಶ್ರೀಮತಿ ಬಸವ್ವ ಮಲ್ಲಯ್ಯ ಪೂಜಾರ, ವಯಾ: 50 ವರ್ಷ
ಉ: ಮನೆಕೆಲಸ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

8. ಶ್ರೀಮತಿ ರೇಣುಕಾ ಕಲ್ಲಯ್ಯ ಪೂಜಾರ, ವಯಾ: 39 ವರ್ಷ
ಉ: ಮನೆಕೆಲಸ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

9. ಶ್ರೀಮತಿ ಗೀತಾ ಬಸಯ್ಯ ಪೂಜಾರ, ವಯಾ: 40 ವರ್ಷ
ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

ದೋಷಾರೋಪಣೆ

ನಾನು ಸುರೇಶ ವಗ್ಗನವರ, ಎಂ. ಎ. ಎಲ್. ಎಲ್. ಬಿ. ಸ್ಪೇಷಲ್, ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ ನಿಮ್ಮ ಮೇಲೆ ಹೊರಸುವ ದೋಷಾರೋಪಣೆ ಏನೇಂದರೆಃ

ಬ್ಯಾಡಗಿ ಪೊಲೀಸ್ ಠಾಣಾ ಹದ್ದಿಯ ಕಲ್ಲೇದೇವರ ಗ್ರಾಮದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ, ಪಿರ್ಯಾದಿ ಮತ್ತು ಆರೋಪಿತರ ಮನೆಗಳು ಅಕ್ಕ-ಪಕ್ಕದಲ್ಲಿರುತ್ತದೆ. ಪಿರ್ಯಾದಿಗೆ ಸಂಬಂಧಿಸಿದಂತೆ ಪಂಚಾಯ್ತಿ ಆಸ್ತಿ ನಂಃ 105 ಮತ್ತು ಆರೋಪಿತರಿಗೆ ಸಂಬಂಧಿಸಿದ ಪಂಚಾಯ್ತಿ ಆಸ್ತಿ ನಂಃ 117 ಅಕ್ಕ-ಪಕ್ಕದಲ್ಲಿರುತ್ತದೆ. ಈ ಎರಡು ಆಸ್ತಿ ಮಧ್ಯೆ ಬಿರುದಿನ ಗೋಡೆ ಇದ್ದು, ಆರೋಪಿತರಿಗೂ ಮತ್ತು ಪಿರ್ಯಾದಿದಾರರಿಗೆ ಸಂಬಂಧಿಸಿದ್ದು ಇರುತ್ತದೆ. ಈ ಎರಡು ಆಸ್ತಿಗಳ ಮಧ್ಯೆ ಇರುವ ಬಿರುದಿನ ಗೋಡೆಗೆ ಸಂಬಂಧಿಸಿದಂತೆ ಆರೋಪಿತರು ಆಗಾಗ ಪಿರ್ಯಾದಿದಾರರ ಜೊತೆ ತಂಟೆ ಮಾಡುತ್ತಾ ಬಂದಿದ್ದು ಇರುತ್ತದೆ.

ದಿನಾಂಕಃ 14.02.2025 ರಂದು ಮುಂಜಾನೆ 11.20 ಗಂಟೆಯ ಸುಮಾರಿಗೆ ಪಿರ್ಯಾದಿಯು ಕಲ್ಲೇದೇವರ ಗ್ರಾಮದ ತಮ್ಮ ಮನೆಯ ಮುಂದೆ ನಿಂತಾಗ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಬಿರುದಿನ ಗೋಡೆಯನ್ನು ಒಡೆಯುತ್ತಿದ್ದಾಗ ಪಿರ್ಯಾದಿಯು ನಮ್ಮ ಕಂಪೌಂಡ್ ಗೋಡೆಯನ್ನು ಯಾಕೇ ಒಡೆಯುತ್ತಿದ್ದೀರಿ ಅಂತಾ ಕೇಳಿದಾಗ ಆರೋಪಿತರಾದ ನೀವೆಲ್ಲರೂ ಪಿರ್ಯಾದಿ ಜೊತೆಗೆ ತಂಟೆ ತಗೆದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಲಂಃ 189(2) ಸಹಕಲಂಃ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿ ಜೊತೆಗೆ ತಂಟೆ ತಗೆದು ದೊಂಬಿ ಎಬ್ಬಿಸಿದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಲಂಃ 191(2) ಸಹಕಲಂಃ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಇವರಿಗೆ ಹೊಡಿಬಡಿ ಮಾಡುತ್ತಿದ್ದಾಗ ಜಗಳ ಬಿಡಿಸಲು ಬಂದ ಚಾಸಾ-4 ನೇದ್ದವರಿಗೆ 5 ಮತ್ತು 6 ನೇ ಆರೋಪಿತರಾದ ನೀವು ಹೊಡಿಬಡಿ ಮಾಡಿದ ಅಪರಾಧಕ್ಕಾಗಿ ಬಿಎ.ನ್.ಎಸ್-2023 ಕಲಂಃ

115(2) ಸಹಕಲಂ: 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಅವಮಾನ ಮಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂ: 74 ಸಹಕಲಂ: 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಆರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಅವಾಚ್ಯಶಬ್ದಗಳಿಂದ ಬೈಯ್ದಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂ: 352 ಸಹಕಲಂ: 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಕೊನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಹಾಗೂ ಅವರ ಕಡೆಯವರಿಗೆ ಇನ್ನೊಂದು ಸಾರಿ ಸಿಕ್ಕರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಧಮಕಿ ಜೀವ ಭಯವನ್ನುಂಟು ಮಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂ: 351(2) ಸಹಕಲಂ: 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

(ಈ ಮೇಲಿನ ಅಪರಾಧಗಳು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ, ಅವು ನನ್ನಿಂದ ವಿಚಾರಣೆಯಾಗಲ್ಪಡುತ್ತವೆಂದು ತಿಳಿಯಬಯಸುತ್ತೇನೆ.)

ದಿನಾಂಕ: 04.08.2025

(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.

ಪ್ರಶ್ನೆ. 1). ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರ : 1 ನೇ ಆರೋಪಿ
2 ನೇ ಆರೋಪಿ
3 ನೇ ಆರೋಪಿ
4 ನೇ ಆರೋಪಿ

5 ನೇ ಆರೋಪಿ
6 ನೇ ಆರೋಪಿ
7 ನೇ ಆರೋಪಿ
8 ನೇ ಆರೋಪಿ
9 ನೇ ಆರೋಪಿ

ಪ್ರಶ್ನೆ .2) ದೋಷಾರೋಪಣೆಯನ್ನು ಒಪ್ಪಿ ಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರ : 1 ನೇ ಆರೋಪಿ
2 ನೇ ಆರೋಪಿ
3 ನೇ ಆರೋಪಿ
4 ನೇ ಆರೋಪಿ
5 ನೇ ಆರೋಪಿ
6 ನೇ ಆರೋಪಿ
7 ನೇ ಆರೋಪಿ
8 ನೇ ಆರೋಪಿ
9 ನೇ ಆರೋಪಿ

(ಈ ಮೇಲಿನ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಎಂದು ದೃಡಿಕರಿಸುತ್ತೇನೆ.)

Sd/-
ದಿನಾಂಕ: 31.01.2026
(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.